Regd No M 1299 Sri ಶಾ 25—10—51

SATYAVADI — 35th Year



ಸ್ಥಾಪಕರು- ಆರಮನೆ ಸಿರಸ್ತೆದಾರ್ ಎ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಸ್ವರಾಜ್ಯ ಸುಖ ಲಭ್ಯ ಎಂದು ?

ಅದೊಂದು ಅಸಹ್ಯಕರ ಪ್ರಣ್ಯಪ್ರಭಾವದಿಂದ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು ; ಸಾಮ್ರಾಜ್ಯಶಾಹಿಯ ಪ್ರಚಂಡ ದರ್ಪವು ಭಾರತಾಂಬೆಯ ಪೂರ್ವಗತ ನೈತಿಶ್ಯ ಪ್ರಭಾವದಿಂದ ಹಿಮ್ಮೆಟ್ಟಿತು! ಗಾಂಧೀಜಿಯ 'ಗೀತೋಪಾಸನೆ' ಆಂಗ್ಲರ ಹೃದಯ ಬರಿಸಿತು ! ಬ್ರಿಟಿಷರು ಓಡಿಹೋದರು. ಇಲ್ಲವಾದರೆ.... ?'

ಒಂದುವೇಳೆ ಅಹಿಂಸಾ ಸತ್ಯಾಗ್ರಹ ವಿಜಯವಾಗದಿದ್ದರೆ — ಚಳವಳಿಯ ಬಗ್ಗುಬಡಿಯಲ್ಪಟ್ಟಿದ್ದರೆ — ಭಾರತದ ದಾಸ್ಯ ವಿಮೋಚನೆಯ ಕಾಲಬಾಂದಿದ್ದರೆ— ಇತಿಹಾಸವು 'ಭಾರತದಲ್ಲಿ ಪುಂಡರ ದಬ್ಬಳಿಕೆ, ಒಂಡುಕೊರರ ಹಾವಳಿ ! ಯೆಂದು ಉಪ್ಪ ಅಕ್ಷರಗಳಿಂದ ಬೊಬ್ಬಿಡುತ್ತಿತ್ತು ! ಗಲಭೆ ನೇ ಇಸವಿಯ ಸಿಪಾಯಿ ದಂಗೆಗಿಂತಲೂ ಸೂರ್ಯಡಿ ಏಗಿಲಾಗಿ ಅಪಖ್ಯಾತಿ ಗಳಿಸುತ್ತಿತ್ತು. ಕಾಂಗ್ರೆಸ್ ಚಳವಳಿ ! ಯಾರು ಕಾಂಗ್ರೆಸಿನ ತತ್ವಗಳನ್ನು ತಲೆಗೆ ತೆಗೆದುಕೊಳ್ಳದೆ ಬರೀ ಅರಾಜಕತೆ ವಿಧ್ವಂಸಕ ಚಟುವಟಿಕೆ. ಬಂಡಾಯಗಳನ್ನೇ ತಮ್ಮ ಮುಖ್ಯ ಧ್ಯೇಯವನ್ನಾಗಿಟ್ಟುಕೊಂಡು ನಲಿದಾಡಿದರೋ ಅಂತಹರನ್ನು ಸ್ವಾತಂತ್ರ್ಯ ದೊಂಕಿದ ಮೇಲೆ ಉಪಾಯಾಂತರದಿಂದ ಸಂಸ್ಥೆಯಿಂದ ಹೊಂಹಾಕದೇ ಅವರ ಹತ್ತಿರವೇ ಅಧಿಕಾರವನ್ನು ಕೊಟ್ಟ ಮೇಲೆ ಆಡಳಿತವು ನೆಮ್ಮದಿಯನ್ನು ಕಂಡೀತೆ ? ಅವರ ದೃಷ್ಟಿಯಿರುವುದು ಅವರ ಮನೆಯತ್ತ ! ದೇಶದತ್ತಲ್ಲ ! ಮೊನ್ನೆ ಬೆಂಗಳೂರಿನಲ್ಲಿ ಕೂಡಿದ ಎ ಐ ಸಿ ಸಿ. ಯಲ್ಲಿ ಅಧ್ಯಕ್ಷ ತಂಡನರು 'ಎರಡುವರೆ ಸಾವಿರ ಸದಸ್ಯರು ಕಾಂಗ್ರೆಸ್ಸಿನಿಂದ ಹೊರಗೆ ಹೋದರು' ಎಂದು ಹೇಳಿದರಷ್ಟೇ ಅಲ್ಲದೆ ಅವರು ಯಾತಕ್ಕಾಗಿ ಕಾಂಗ್ರೆಸ್ ಬಿಟ್ಟರು ಎಂದು ಚರ್ಚಿಸಲಿಲ್ಲ ' ಕಾಂಗ್ರೆಸನ್ನು ಆದರ್ಶ ತಳಹದಿಯ ಮೇಲೆ ಹೇಗೆ ಪುನರ್ಘಟಿಸಬೇಕು ' ! ಎಂಬ ವಿಷಯ ಎ ಐ ಸಿ. ಸಿ. ಯಲ್ಲಿ ಯೋಗ್ಯ ನಿರ್ಣಯಗಳು ಕೈಕೊಂಡಿಲ್ಲ ಬೀಳುವ ಮನೆಯನ್ನು ಅಳೆದು ಭವ್ಯ ತಳಹದಿಯ ಮೇಲೆ ಪುನಃ ಕಟ್ಟುವುದನ್ನು ಬಿಟ್ಟು ಅಲ್ಲಲ್ಲಿಗೇ ' ತೇಪೆ ' ಹಚ್ಚಿ ಭ್ರಮೆಯ ಸವಿ ನುಡಿಗಳಿಂದ ಜನರನ್ನು ಮೆಚ್ಚಿಸಿ ಚುನಾವಣೆಯನ್ನು ದಾಟಲು ಯತ್ನಿಸಿದರು ಕಾಂಗ್ರೆಸ್ ಮುಖಂಡರು. ಮಂದಾಳುಗಳ ಮೋಹಕ ಮಾತುಗಳ ಬೆಲೆಯನ್ನು ಈ ಐದು ವರ್ಷಗಳಲ್ಲಿ ಚನ್ನಾಗಿ ಭಾರತೀಯರು ಕಂಡುಕೊಂಡಿದ್ದಾರೆ ಅಂದಮೇಲೆ ಬೆಂಗಳೂರಿನ ಗಾಜಿನ ಮನೆಯಲ್ಲಿ ಆಡಿದ ಸುಣ್ಣಗಿನ ಮಾತುಗಳಿಗೆ ಮೋಸಹೋಗಲು ಯಾರೂ ಸಿದ್ಧರಾಗಲಾರರು. ಮಾಡತಕ್ಕ ಕಾರ್ಯಗಳು ಅತ್ಯಾವಶ್ಯಕ ಪಂಚಾಲುಗಳಲ್ಲಿ ಉಳಿಯದೇ ಒಬ್ಬರು ದಶಂಬರದೊಳಗೇ ಕಾರ್ಯರೂಪಕ್ಕೆ ಒರಲಿ. ಆಗತಕ್ಕವುಗಳು ಈವಾಗಲೇ ಆಗಲಿ ! ಇನ್ನೈದು ವರ್ಷಗಳ ವರೇಗೂ ಸುಳ್ಳು ಹೇಳುತ್ತಾ ಕಾಲಹರಣ ಮಾಡಬೇಕೆಂದಿಲ್ಲ.

ಜನತೆಗಾದರೂ ಇಂದು ಇದ್ದದ್ದರೊಳಗೆ ಕಾಂಗ್ರೆಸ್ಸಿನಷ್ಟು ಉತ್ತಮ ಪಕ್ಷ ಮತ್ತೊಂದಿಲ್ಲ. ಇವರೇ ತಪ್ಪನ್ನು ತಿದ್ದಿಕೊಂಡು ಚುನಾವಣೆಯಲ್ಲಿ ವಿಜಯಿಗಳಾಗಲಿ ! ಜನಾಭಿಪ್ರಾಯಕ್ಕೆ ಈಗಿನಿಂದಲೇ ಪ್ರಾಶಸ್ತ್ಯ ಕೊಟ್ಟು ಆಡಳಿತ

[ಹಿಂದಿನ ಪುಟದಲ್ಲಿ]

× ಭಾರತ ವಿಜ್ಞಾನಿ ಮತ್ತು ಮಾಜಿ ಆರ್. ಎ. ಎಫ್. ನಲ್ಲಿ ಅಧಿಕಾರಿಯಾಗಿದ್ದ ಶ್ರೀ ಡಿ ಎಸ್. ಶರ್ಮಾರವರು ಯುದ್ಧ ಕಾಲದಲ್ಲಿ ತಾವು ಕಂಡು ಹಿಡಿದ ರೇಡಾರ್ ಬ್ರಿಟಿಷರು ಉಪಯೋಗಿಸಿಕೊಂಡರೆಂದು ರಾಯಲ್ ಸಮಿತಿ ಮುಂದೆ ಹಕ್ಕುಭಾದ್ಯತೆ ಎತ್ತಿದ್ದಾರೆ

× ಸಾರ್ಡೀನಿಯಾ ಪರ್ವತ ಕಳಚಿ ಬೀಳುತ್ತಿದೆ

ಜಹಗೀರುದಾರರು ಕಮ್ಯುನಿಸ್ಟರಾಗುವರು ?

— ಈ ತಿಂಗಳು ತಾ|| 31 ರಲ್ಲಿ ಭಾರತದ ಸಚಿವ ಪದವಿಗೆ ಶ್ರೀ ರಾಜಾಜಿ ರಾಜೀನಾಮೆ ಕೊಡಲಿದ್ದಾರು.

— ಭೂಮಿಯನ್ನಿನ ನಿಧಿಯೊಂದನ್ನು ರಕ್ಷಿಸುತ್ತಿದ್ದ ಒಂದು ದೇವತೆಗೆ ಬಲಿ ಕೊಡಲು ಈರ್ವರು ಸನ್ಯಾಸಿಯರು ಓರ್ವ ಹೆಂಗಸನ್ನು ಪ್ಲೇಡಟ್ಟೂರಿನಲ್ಲಿ ಬಲಿ ಕೊಡುವ ಪ್ರಯತ್ನ ಮಲ್ಲಿದ್ದರು. ಆದರೆ ಅವರು ಪೋಲೀಸರಿಗೆ ಸಿಕ್ಕಿ ಬಿದ್ದರು

— ಎಲ್ಲ ತರಗತಿಯ ಬಟ್ಟೆಯ ಮಾರಾಟದ ಮೇಲಿನ ಎಲ್ಲ ನಿರ್ಬಂಧಗಳನ್ನು ಬೊಂಬಾಯಿ ಸರ್ಕಾರ ತೆಗೆದು ಹಾಕಿತು

——

100435 ಮಂದಿ ಟಿಕೇಟಿಲ್ಲದೆ ಜಿ. ಐ ಪಿ ಮತ್ತು ಬಿ. ಬಿ. ಸಿ. ಐ. ರೈಲ್ವೆಯಲ್ಲಿ ಕಳೆದ ಆಗಸ್ಟ್ ತಿಂಗಳಿನಲ್ಲಿ ಟಿಕೇಟಿಲ್ಲದೆ ಪ್ರಯಾಣ ಮಾಡಿದರೆಂದು ಬೊಂಬಾಯಿ ವಾರ್ತೆ.

ಧನ್ವಂತರಿ ಜಯಂತಿ

ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಇದೇ ತಾ|| 28 ನೇ ಭಾನುವಾರ ಸಂಜೆ 6 ರವರೆಗೆ ಗಂಟೆಗೆ ಶ್ರೀ ಧನ್ವಂತರಿ ಜಯಂತ್ಯುತ್ಸವವನ್ನು ನಡೆಯಿಸುವದಾಗಿ ನಿಶ್ಚಯಿಸಿರುತ್ತೆ. ಏದ್ವಾ ಶ್ರೀ ರಾವಣಚಂದ್ರಸೋಮಯಾಜಿಗಳು ಉಪನ್ಯಾಸ ಮಾಡಲು ಒಪ್ಪಿರುತ್ತಾರೆ — ಎಂದು ಆಯುರ್ವೇದ ವೈದ್ಯಸಂಘ, ಕೃಷ್ಣರಾಜಮೊಹಲ್ಲಾ, ಮೈಸೂರು ಇದರ ಗೌರವ ಕಾರ್ಯದರ್ಶಿಗಳಾದ ಶ್ರೀ ಗೋಪಾಲಕೃಷ್ಣಾವಧಾನೀಯವರು ತಿಳಿಸುತ್ತಾರೆ.

ಅಸೆಂಬ್ಲಿ

ಬೆಂಗಳೂರು : ಮೈಸೂರು ಲೆಜಿಸ್ಲೆಟೀವ್ ಅಸೆಂಬ್ಲಿ ನಿನ್ನೆ ಶ್ರೀ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ನೇರಿತ್ತು. ಲಿಯಾಕತ್ ಅಲಿಯವರ ನಿಧನದ ಬಗೆಗೆ ಸಂತಾಪಸೂಚಕ ನಿರ್ಣಯ ಅಂಗೀಕೃತವಾಯಿತು ಪ್ರಮಾಣ ಮಾಡದೆ ಸಭೆ ಕಾರ್ಯಕ್ರಮಗಳಲ್ಲಿ ಮೈಸೂರು ಸಮೂಹ ಕ್ಷೇತ್ರದಲ್ಲಿ ಭಾಗಿಯಾದುದಕ್ಕೆ ತಮ್ಮನ್ನು ಕ್ಷಮಿಸಲು ಸಮಾಜವಾದಿ ಡಾ|| ಶ್ರೀ ಕಂಠೇಶ್ವರರು ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡಿದ್ದಾರೆ.

ದಿವ್ಯವಾಣಿ

ಸಕಲ ಜ್ಞಾನೇಂದ್ರಿಯಗಳಲ್ಲಿ ಕಣ್ಣುಗಳೇ ಶ್ರೇಷ್ಠ; ಆದರೂ ಕಣ್ಣಿದ್ದೂ ಸತ್ಯವನ್ನು ಕಾಣದ ಕುರುಡರ ಗತಿ, ಕಣ್ಣಿಲ್ಲದ ಕುರುಡರಿಗಿಂತ ಘೋರವಾದುದು. — ಕಿರಸೆಲ್

ವಾರ್ತೆಗಳು

ಮಧ್ಯ ಭಾರತ ವಿಧಾನಮಂಡಲದಲ್ಲಿ ಮೊನ್ನೆ ದಿವಸ ಸರ್ದಾರ್ ಫಾಲ್ಕೆಯವರು ಮಾತನಾಡುತ್ತಾ, ಸರಕಾರ ಜಹಗೀರುಗಳನ್ನು ರದ್ದಾಯಿತಿ ಮಾಡುವದರಿಂದ ಸಲೀಸಾಗಿ ಕಮ್ಯುನಿಸಂಗೆ ಬೆಂಬಲನಿತ್ತಂತಾಗುವದಾಗಿ ತಿಳಿಸಿದರು. ಇದರಿಂದ ಜಹಗೀರುದಾರರು ಕಮ್ಯುನಿಸ್ಟರಾಗುವರೆಂದು ಅವರು ಹೇಳಿದರು ಎಂದು ಗ್ವಾಲಿಯರ್ ವಾರ್ತೆ ತಿಳಿಸುತ್ತದೆ.

ಮಹಾ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅನೇರಂಕೆಯಲ್ಲಿನ ತಮ್ಮ ರಾಯಭಾರಿ ಹುದ್ದೆಗೆ ರಾಜೀನಾಮೆ ಕೊಡಲು ಅನುಮತಿ ಕೊಡಲಾಗಿದೆಯೆಂದು ದೆಹಲಿ ವಾರ್ತೆ.

ಆಯುಧಗಳನ್ನು ಸಂಬರಾಜು ಮಾಡಬೇಕೆಂದು ಈಜಿಪ್ಷಿಯನ್ ಪ್ರದರ್ಶನಕಾರರು ನಿನ್ನೆ ಕೈರೋವಿನಲ್ಲಿರುವ ರಷ್ಯ ರಾಯಭಾರಿ ಕಚೇರಿ ಎದುರು ಪ್ರದರ್ಶನ ಮಾಡಿದರು

ಮೈಸೂರು ಪ್ರಾಂತದಲ್ಲೂ ಎರಡು ದಿವಸ ಚುನಾವಣಾ ಪ್ರವಾಸವನ್ನು ಪಂಡಿತ ನೆಹರು ಕೈಗೊಳ್ಳಲಿರುವರು

ಶ್ರೀ ರಾಜುರವರ ಮೇಲಿನ ಮೊಕದ್ದಮೆಯ ಸೆಷನ್ಸ್ ವಿಚಾರಣೆ ಬರುವ ತಿಂಗಳು 8 ರಿಂದ ಆರಂಭವಾಗುವದೆಂದು ಬೆಂಗಳೂರು ವಾರ್ತೆ

ಭಾರತ ಕಮ್ಯುನಿಸ್ಟ್ ಪಕ್ಷದ ಉತ್ತರ ಪ್ರದೇಶ ಸಮಿತಿ ಪ್ರಾಂತ ಶಾಸನ ಸಭೆ ಹಾಗೂ ಪಾರ್ಲಿಮೆಂಟಿಗೆ ಒಟ್ಟು ಏನತ್ತು ಮಂದಿ ಉಮೇದುವಾರರನ್ನು ನಿಲ್ಲಿಸಲಿದೆ

ನೆಹರು ಪ್ರತಿಸ್ಪರ್ಧಿ

ಪಂ|| ನೆಹರು ವಿರುದ್ಧ ಉತ್ತರ ಪ್ರದೇಶ ಕ್ರಾಂತಿಕಾರಕ ಸಮಾಜವಾದಿ ಪಕ್ಷ ಬದರಿಪ್ರಸಾದ ಎಂಬರನ್ನು ಚುನಾವಣೆಗೆ ನಿಲ್ಲಿಸುವುದು

ಯಂತ್ರವನ್ನು ಸ್ವಚ್ಛವಾಗಿರಿಸಲಿ ! ಕಾಂಗ್ರೆಸ್ಸು ಅಡ್ಡಹಾದಿ ಹಿಡಿದಿದೆಯೆಂದು ಜನತೆಯು ಬೇರೊಂದು ಪಕ್ಷವನ್ನು ಆರಿಸ ಹೊರಟರೆ ದೇಶದ ಪರಿಸ್ಥಿತಿಯು ಇನ್ನೂ ಹೆಚ್ಚಿಗೆ ದುರ್ಗಂಧವಾದೀತ ! ಎರಡು ಸಾವಂಪ್ಪ ಬರೆ ಮಂತ್ರಿಗಳೇ ಭಾರತವನ್ನಾಳಲು ಬೇಕಾಗಿರುವಾಗ ಅಷ್ಟು ಮಂದಿ ಉತ್ತಮ ಪುರುಷರು ಯಾವ ಪಕ್ಷದಲ್ಲೂ ಸಿಗಲಾರರು ! ಕಾಂಗ್ರೆಸ್ಸು ದೇಶದ ಭವಿಷ್ಯತ್ತು, ತನ್ನ ಪೂರ್ವೇತಿ ಹಾಸಗಳನ್ನು ಮನಗಂಡು ತನ್ನ ಭವಿಷ್ಯತ್ತನ್ನು ರೂಪಿಸಿಕೊಳ್ಳಲಿ ! ವಿಷಕ್ರಿಮಿ ಗಳನ್ನು ನಿರ್ದಾಕ್ಷಿಣ್ಯವಾಗಿ ನಾಶಗೈದು ಪರಿಶುದ್ಧತೆಯಿಂದ ಮುಂದಿಬಂದು ದೇ ಶಕ್ಕೆ ಹೆಗಲುಕೊಡಲಿ ! ಆಗಲೇ ಇತಿಹಾಸವು ಉಜ್ವಲವಾದೀತು ! ಆ ದರೆ ಭಾರತೀಯರು ಸಂಪೂರ್ಣ ಸ್ವಶಾಂತಿಗಳಿಂದ ಮಾನವರಾಗಿ ಬಾಳಿ ಯಶೋ ಮುಕ್ತಿಗಳ ಭಾಗಿಗಳಾಗಬೇಕಾದರೆ – ಭಾರತವು ಇಂದಿನ ಪ್ರಚಂಡ ದೈವೀ ಪ್ರಕೋಪದಿಂದ ಹೊರಗಳಿಯಬೇಕಾದರೆ ಇಂದಿರುವ ಆವ ರಾಜಕೀಯ ಪಕ್ಷ ಗಳ ಅಡಳಿತದಿಂದಲೂ ಸಾಧ್ಯವಾಗದು. ಭಾರತಕ್ಕೆ ಸಂಪೂರ್ಣ ಸ್ವರಾಜ್ಯ ಸುಖ ಲಭಿಸಬೇಕಾದರೆ ಎಂಡೇ ಮಾರ್ಗದಲ್ಲಿ ! ಒಂದು ಈಗಿನ ಎಲ್ಲಾ ಪಕ್ಷ ಗಳೂ ವಿಸರ್ಜಿಸಲ್ಪಡಬೇಕು. ಪಕ್ಷದ ಹೆಸರಿನಿಂದ ಜನತೆಯು, ಮುತ್ಸದ್ದಿಗಳು ಛಿನ್ನವಿಛಿನ್ನವಾಗುವದು ನಿಲ್ಲಬೇಕು ವಾಕ್ಸಿಕ ಚುನಾವಣಾ ಪದ್ಧತಿ ಏನೋ ಜನೆಯಾಗಿ ದೇಶದಾದ್ಯಂತ ವ್ಯಕ್ತಿಶಃ ಚುನಾವಣಾ ಪ್ರಾರಂಭವಾಗಬೇಕು ಆಗ ಜನತೆಯು ಯಾವಪಕ್ಷದ ಬಲೆಗೂ ಬೀಳದೆ ಯೋಗ್ಯ ಕರ್ತವ್ಯದಕ್ಷ ವಿನೇಕ ಶೀಲ ರಾಜಕಾರಣಿಗಳನ್ನು ಮತಹಾಕಿ ಆರಿಸಿತಾಲಾಸರು ಮತದಾನವಾಗುವ ವರೆಗೆ ವ್ಯಕ್ತಿಶಃ ಎಷ್ಟು ಪ್ರತಿಸ್ಪರ್ಧಿಸಿದರೂ ಆರಿಸಿಬಂದನೇಲೆ ತಮ್ಮೊಳಗೆ ದ್ವೇಷಭಾವನೆಯನ್ನು ತೊರೆದು ಸಹೋದರತೆಯಿಂದ ಮಂತ್ರಿಮಂಡಲದಲ್ಲಿ ಕಾರ್ಯ ವಲಂಬಿಗಳಾಗಬೇಕು ಆರಿಸಿಬಂದವರು ಈ ಪದ್ಧತಿಯಿಂದ ದೇಶದ ಉತ್ತಮ ವ್ಯಕ್ತಿಗಳೆಲ್ಲರೂ ಅಮಾಯಾನ ಪಕ್ಷದವರೆ ಇಲಿ ಮಂತ್ರಿಮಂಡಲದಲ್ಲಿ ಒಂದು ಗೂಡವು ಪಕ್ಷ–ಪಾಗಡಗಳ ಅಸೂಯೆ ಸ್ಪರ್ಧೆ ತಿಕ್ಕಾಟ ಅಪಪ್ರಚಾರಗಳು ಆಗ ಮಾಯವಾಗಿ ದೇಶದಲ್ಲಿ ಶಾಂತಿ ನೆಲೆಸುವುದು [ಧ ಬೋ]

For All Your
Headaches, Eye Troubles and Defective Sight

— consult —

THE EYE – SIGHT INSTITUTE
1430 / 1 Post Office Road,
Krishnamurthipuram, Mysore

ಗೋ ಸಂರಕ್ಷಣೆ ಮಾಡಿ



Protect the Cow

ಉಡ್‌ಲ್ಯಾಂಡ್ಸ್ 26–10–51 ರಿಂದ
ಶಿ ನ್ಸ

Neki Aur Badi ನೇಕಿ ಔರ್ ಬದಿ
ಮಧುಬಾಲ, ಗೀತಾಬಾಲ, ಕಿದಾರನಾಥ್, ಕಕ್ಕೂ ಪಾತ್ರವಹಿಸಿರುವ
ಸುಮನೋಹರ ಹಿಂದಿ ಚಿತ್ರ] [ಪ್ರತಿ ದಿನ 3 ಪ್ರದರ್ಶನಗಳು

ಅಪೇರ— ಕೀರ್ತಿಯುತ 4 ನೇ ವಾರ
ನ ವಾ ರ್ಧಿ ಕಾ ರಿ
ಪಾತ್ರ — ಅಂಜಲಿದೇವಿ, ನಾಗಯ್ಯ, ರಾಮಚಂದ್ರಕ್, ಸಂಬಿಯಾರ್
ಮನೋನ್ನತ ತಮಿಳು ಚಿತ್ರ ಪ್ರತಿ ದಿನ 3 ಆಟಗಳು

ರಣಜಿತ್ 26–10–51 ರಿಂದ
ಮನಮೋಹನ ಹಿಂದಿ ಚಿತ್ರ ಪ್ರತಿ ದಿನ 3 ಆಟಗಳು
ನೌಜವಾನ್ Naujavn
ಪಾತ್ರ— ನಳಿನಿ ಜಯವಂತ್, ಪ್ರೇಮನಾಥ್

ಸತ್ಯವಾದಿ
ದಿನಪತ್ರಿಕೆ ತಿಂಗಳಿಗೆ 6 ಆಣೆಗಳು
ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
– ಪ್ರ ಬೋ ಧ –
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1–14–0

For Quality Printing
L. N. Press
Sivarampet, Mysore

ಶಕ್ತಿಸುಧಾ
— ಉತ್ತಮವಾದ ಟಾನಿಕ್ —

SHAKTI
SUDHA
A Superb Tonic

Edited, Printed and Published by Dharma Prachara Nirata M. S. Krishna Rao. at the Satyavadi Press Chamarajpuram Mysore